**ದಿ.06.02.2025 ರಂದುಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.**

**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಪಾಟೀ ಸವಾಲು : ಶ್ರೀ.ಸಿಎನ್ ಡಿ. ವಕೀಲರಿಂದಃ ಆರೋಪಿ ಪರವಾಗಿ**

ನಾನು 2006 ರಲ್ಲಿ ಕಾರ್ಗೋ ಕಂಪನಿ ಕೆಲಸ ಮಾಡುವ ಸಂದರ್ಭದಲ್ಲಿ ಜೆ.ಸಿ ರೋಡ್, ಯೂನಿಟಿ ಬಿಲ್ಡಿಂಗ್ ನಲ್ಲಿ ಇದ್ದೆ. ನಮ್ಮ ಕಂಪನಿಯಲ್ಲಿ ಒಟ್ಟು 20 ಕ್ಕೂ ಹೆಚ್ಚು ನೌಕರರು ನಾನು ಕೆಲಸ ಮಾಡುವ ಸಂದರ್ಭದಲ್ಲಿ ಇದ್ದರು. ನಾನು ನನ್ನ ಕಂಪನಿಯಲ್ಲಿ ಲಾಜೆಸ್ಟಿಕ್ ಮತ್ತು ವೇರ್ ಹೌಸ್ ಕೆಲಸ ಮಾಡುತ್ತಿದ್ದೆ. ನಾನು ಬೇರೆ ಕಂಪನಿಗಳಿಂದ ಸರ್ವೀಸ್ ನ್ನು ಪಡೆಯುತ್ತಿದ್ದೆ. ನಮ್ಮ ಕಂಪನಿಯ ಅಡಿಟ್

ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಮಹಜರ್ ಗೆ ಹಾಜರಾಗುವಂತೆ ಪೊಲೀಸರು ನನಗೆ ಯಾವುದೇ ನೋಟಿಸ್ ನೀಡಿರುವುದಿಲ್ಲ ಆದರೆ ದೂರವಾಣಿ ಕರೆ ಮಾಡಿದ್ದರು.

2. ಆರೋಪಿಯ ವಾಸ ಮಾಡುವ ಸ್ಥಳದ ಬಗ್ಗೆ ನನಗೆ ಮಾಹಿತಿ ಇದೆ, ಆರೋಪಿಯು ಒಂದನೇ ಮಹಡಿಯಲ್ಲಿ ವಾಸ ಮಾಡುತ್ತಿದ್ದರು. ನನ್ನ ಜೊತೆಯಲ್ಲಿ ಮಹಜರ್ ಗೆ ರಮೇಶ್ ರವರು ಹಾಜರಿದ್ದರು. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ನಿಪಿ.3 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ನನಗೆ ರಮೇಶ್ ರವರು ಓದಿ ತಿಳಿಸಿರುತ್ತಾರೆ ಎಂದು ಹೇಳುತ್ತಾರೆ. ನನ್ನ ಸಮಕ್ಷಮ ಪೊಲೀಸರು ಮಹಜರ್ ಮಾಡುವ ಸಮಯದಲ್ಲಿ ಐದು ದಾಖಲಾತಿಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಾನು ದಾಖಲಾತಿಗಳನ್ನು ಓದಿ ತಿಳಿದು ಕೊಂಡಿರುತ್ತೇನೆ. ನನಗೆ ನಿಪಿ.3 ರಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ, ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ದಾಖಲಾತಿಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ನಮ್ಮ ಎಂ.ಡಿ ಎಂದರೆ ಸರಿ. ನಾನು ಚಾಸಾ-1 ರವರ ಆದೇಶದ ಮೇರೆಗೆ ನಾನು ಮಹಜರ್ ಗೆ ಹಾಜರಾಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿಯ ಮನೆ ಮತ್ತು ಆಫೀಸ್ ಗೆ ಹೋಗಿಲ್ಲ ಮತ್ತು ಯಾವುದೇ ದಾಖಲಾತಿಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರು ಸಹ ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತನಿಖಾ ಸಮಯದಲ್ಲಿ ಪೊಲೀಸರು ನನ್ನ ಹೇಳಿಕಯನ್ನು ಪಡೆದುಕೊಂಡಿಲ್ಲ.

**ಮರು ವಿಚಾರಣೆ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**
**ಬೆಂಗಳೂರು.**

PW-3

**ಸಿಸಿನಂ.5722/2008**